ಮೂಲ ದಾವಾ ಸಂಖ್ಯೆ. 82/2015 ಡಿ ಡಬ್ಲ್ಯೂ 4

(ದಿನಾಂಕ 21-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಎಂ ಎಸ್ ವಕೀಲರಿಂದಃ-

ಈ ದಾವೆಯನ್ನು ಮಲ್ಲಿಕಾರ್ಜುನ್ ಇವರು ಸಣ್ಣ ದುರುಗಪ್ಪ ಇವರ ಮೇಲೆ ದಾಖಲಿಸಿದ್ದಾರೆ. ದಾವಾಸ್ತಿ ಮೂಲತಃ ಯಾರದ್ದು ಎಂದರೆ ಸಾಕ್ಷಿಯು ಅದನ್ನು ಬೈಲಜ್ಜ ಇವರು ಮಾಡುತ್ತಿದ್ದರು ಅವರ ನಂತರ ಸಣ್ಣ ದುರುಗಪ್ಪನ ಮಕ್ಕಳು ಮಾಡುತ್ತಿದ್ದಾರೆ. ಬೈಲಜ್ಜನ ನಂತರ ಸಣ್ಣ ದುರುಗಪ್ಪನ ಮಕ್ಕಳು ಮಾಡುತ್ತಿದ್ದಾರೆನ್ನುವುದು ಸುಳ್ಳು ಎಂದರೆ ಸರಿಯಲ್ಲ. ದಾವಾಸ್ತಿಗೆ ಸಂಬಂಧಿಸಿದಂತೆ ಪಹಣಿ, ಇಸಿ ನಾನು ನೋಡಿರುವುದಿಲ್ಲ. ದಾವಾಸ್ತಿಯನ್ನು ಯಾರು ಯಾರಿಗೆ ಮಾರಾಟ ಮಾಡಿದ್ದಾರೆನ್ನುವುದು ನನಗೆ ಗೊತ್ತಿಲ್ಲವೆಂದರೆ ಸರಿ ಸಾಕ್ಷಿ ಮುಂದುವರೆದು ಸದರಿ ಆಸ್ತಿಯನ್ನು ಸಣ್ಣ ದುರುಗಪ್ಪನ ಮಕ್ಕಳು ಮಾಡುತ್ತಾರೆನ್ನುತ್ತಾರೆ. ದಾವಾಸ್ತಿಯ ಚಕ್ಕುಬಂದಿ ಪೂಃಗಂಗಾಧರ ಇವರ ಸ್ವತ್ತು, ಪಃ ನನ್ನ ಸ್ವತ್ತು, ದಃಶಂಕರ್ ಇವರ ಸ್ವತ್ತು, ಉಃ ಮಡಿವಾಳರ ಗಿಡ್ಡಪ್ಪ ಇವರ ಸ್ವತ್ತು ಬರುತ್ತದೆ. ದುರುಗಪ್ಪ ನನಗೆ ಸಂಬಂಧಿಕನಲ್ಲ. ದಾವಾಸ್ತಿಯನ್ನು ಪ್ರತಿವಾದಿ ಸಾಗು ಮಾಡುತ್ತಿದ್ದಾರೆ ಅಂತಾ ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ. ದುರುಗಪ್ಪನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಪ್ರಮಾಣಪತ್ರವನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ